**OS: 34/2015**
**P.W-3**

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ**

ದಿನಾಂಕಃ 27.02.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದಃ**

ನಾನು ದಿನಾಂಕ 27.02.2026 ರಂದು ನಮ್ಮ ವಕೀಲರ ಮೂಲಕ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಹಾಗೂ ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿ.ಪಿ 3 ರ ದಾಖಲೆಯನ್ನು ನನ್ನ ತಾಯಿ ಜರೀನಾಬೇಗಂ, ಜರೀನಾಬಾನು, ಶಬನಬ ರವರಿಗೆ ದಿಃ 05.02.2009 ರಂದು ಸರ್ವೆ ನಂಃ 512, ವಿಸ್ತೀರ್ಣ 1 ಎಕರೆ 15 ಸೆಂಟ್ಸ್ ಆಸ್ತಿಗೆ ಸಂಬಂಧಿಸಿದಂತೆ ದಾನಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆ ದಿಃ 06.02.2009 ರಂದು ನೊಂದಣಿ ಆಗಿರುತ್ತದೆ. ಸದರಿ ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದು ನನ್ನ ಸಹಿಯನ್ನು ನೋಡಿ ಗುರುತಿಸಿರುತ್ತೇನೆ ಸದರಿ ಸಹಿಯನ್ನು ನಿ.ಪಿ 3-ಸಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನನ್ನ ತಾಯಿ ಪೀರಮ್ಮ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ಅತ್ತಿಗೆ ಜರೀನಾಬಾನುರವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ 3-ಡಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಶಬನಬರವರು ಸಹಿ ಮಾಡಿದ್ದು ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ 3-ಇ ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಶನಬೋಗ ಪ್ರಕಾಶ್ ರಾವ್ ರವರು ಬರೆದಿರುತ್ತಾರೆ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸದ 4 ಸಹಿಯನ್ನು ನಿ.ಪಿ 3-ಎಫ್ ಎಂದು ಗುರುತಿಸಲಾಯಿತು.

(ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**